ಇ) ವೇಗಮಿತಿ ಮಾಡಲು ವೈಜ್ಞಾನಿಕವಾಗಿ ನ್ಯಾಯಾಲಯ ತಿಳಿಸಿರುವ ಹಾಗೇ ರಸ್ತೆ ಡುಬ್ಬಗಳು ಹಾಕಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಮೈಸೂರು-ಇಲವಾಲ-ಬಂಟ್ವಾಳ ರಸ್ತೆಯು ರಾಜ್ಯ ಹೆದ್ದಾರಿ ನಂ. 88 ಆಗಿದ್ದು ಬಂಟ್ವಾಳ-ಮಂಗಳೂರು ರಸ್ತೆಯು ರಾಷ್ಟ್ರೀಯ ಹೆದ್ದಾರಿ ನಂ. 48 ಹಾಗೂ ಮಂಗಳೂರು ಕಾಸರಗೋಡು ರಸ್ತೆಯು ರಾಷ್ಟ್ರೀಯ ಹೆದ್ದಾರಿ ನಂ. 17 ಆಗಿರುತ್ತದೆ.

ಆ) ಅವೈಜ್ಞಾನಿಕವಾಗಿ ಹಾಕಿರುವ ರಸ್ತೆ ಉಬ್ಬುಗಳನ್ನು ಹಂತ ಹಂತವಾಗಿ ತೆಗೆಸಿ, ಅತ್ಯಂತ ಅವಶ್ಯಕತೆ ಇರುವ ಕಡೆ ವೈಜ್ಞಾನಿಕವಾಗಿ ವಿನ್ಯಾಸ ಮಾಡಿದ ರಸ್ತೆ ಉಬ್ಬುಗಳನ್ನು ಹಾಕಲಾಗುತ್ತಿದೆ.

ಇ) ವೇಗಮಿತಿ ಮಾಡಲು ಸರ್ಕಾರಿ ಆದೇಶಾನುಸಾರ ವೈಜ್ಞಾನಿಕ ವಿನ್ಯಾಸದ ರಂಬಲ್ ಸ್ಟಿಪ್‌ಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಪ್ರವಾಸಿ ಕೇಂದ್ರಗಳ ಅಭಿವೃದ್ಧಿ

2247 (2675) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) : ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಗುರುತಿಸಲಾಗಿರುವಂತಹ ಪ್ರವಾಸಿ ಸ್ಥಳಗಳೆಷ್ಟು;

ಆ) ಗುರುತಿಸಲಾಗಿರುವ ಪ್ರವಾಸಿ ಸ್ಥಳಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ರಾಜ್ಯದ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗೆ ಕಳೆದ 3 ವರ್ಷಗಳಲ್ಲಿ ಸರ್ಕಾರ ಒದಗಿಸಿದ ಅನುದಾನ ಎಷ್ಟು;

ಈ) ಒದಗಿಸಲಾದ ಅನುದಾನವನ್ನು ಯಾವ ಪ್ರವಾಸಿ ಕೇಂದ್ರಗಳಿಗೆ ಯಾವ ಉದ್ದೇಶಗಳಿಗೆ ಎಷ್ಟೆಷ್ಟು ವೆಚ್ಚ ಮಾಡಲಾಗಿದೆ;

ಉ) ರಾಜ್ಯದ ಪ್ರವಾಸಿ ಸ್ಥಳಗಳ ಭೇಟಿಗೆ ಬರುವ ಪ್ರವಾಸಿಗರ ಅನುಕೂಲಕ್ಕಾಗಿ ಪ್ಯಾಕೇಜ್ ಟೂರ್‌ಗಳ ಮಾಹಿತಿ ಕೇಂದ್ರಗಳ ಹೋಟೆಲ್‌ಗಳ ಇತ್ಯಾದಿ ವ್ಯವಸ್ಥೆಯನ್ನು ಯಾವ ಯಾವ ಪ್ರವಾಸಿ ಕೇಂದ್ರಗಳಲ್ಲಿ ಕೈಗೊಳ್ಳಲಾಗಿದೆ;

ಊ) ಉಳಿದ ಪ್ರವಾಸಿ ಸ್ಥಳಗಳಲ್ಲಿ ಈ ಸೌಲಭ್ಯವನ್ನು ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದರೆ, ನಿರ್ದಿಷ್ಟ ಕಾಲಮಿತಿ ತಿಳಿಸಿರಿ?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):

ಅ) 236

ಆ) ಯಾತ್ರಿ ನಿವಾಸ, ಪ್ರವಾಸಿ ಸಂಕೀರ್ಣ, ಹೆದ್ದಾರಿ ಸೌಲಭ್ಯ, ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ, ಇತ್ಯಾದಿ.

ಇ) (ರೂ. ಲಕ್ಷಗಳಲ್ಲಿ)

	ವರ್ಷ- Year	ಮೊತ್ತ- Amount (ರೂ. - Rs.
1.	1999-2000	465.00
2.	2000-2001	430.00
3.	2001-2002	475.00

ಈ) ಅನುಬಂಧ 1ರಲ್ಲಿ ಒದಗಿಸಲಾಗಿದೆ.

ಉ) ಪ್ರವಾಸಿಗರ ಅನುಕೂಲಕ್ಕಾಗಿ ಈ ಕೆಳಕಂಡ ಸ್ಥಳಗಳಿಗೆ ಬೇರೆ ಬೇರೆ ಪ್ರವಾಸಿ ಸ್ಥಳಗಳಿಗೆ ವ್ಯವಸ್ಥಿತ ಸ್ಥಳಗಳಿಗೆ ಪ್ರವಾಸಗಳನ್ನು ಏರ್ಪಡಿಸಲಾಗಿದೆ.

ಎ) ಅನುಬಂಧ 2ರಲ್ಲಿ ಒದಗಿಸಲಾಗಿದೆ.

ಬಿ) ಅನುಬಂಧ 3ರಲ್ಲಿ ಒದಗಿಸಲಾಗಿದೆ.

ಊ) ಹೌದು. ಹಂತ ಹಂತವಾಗಿ ಅನುದಾನದ ಲಭ್ಯತೆಗೆ ಅನುಗುಣವಾಗಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುವುದು.

ಅನುಬಂಧ - 1

1999-2000ರಲ್ಲಿ ಮಂಜೂರಾಗಿರುವ ಯೋಜನೆಗಳು

ಕ್ರಮ ಸಂಖ್ಯೆ	ಯೋಜನೆಗಳ ಹೆಸರು	ಅಂದಾಜು ವೆಚ್ಚ (ಲಕ್ಷ ರೂಗಳಲ್ಲಿ)
1.	ಉಡುಪಿ ಜಿಲ್ಲೆ ಪಾಜಕ ಕ್ಷೇತ್ರದಲ್ಲಿ ಪ್ರವಾಸಿ ಗೃಹ	80.04
2.	ಹನುಮಂತನಗರದಲ್ಲಿ ಪ್ರವಾಸಿ ಗೃಹ (ಯೋಜನೆಯ ಬಾಕಿ ವೆಚ್ಚ)	10.00
3.	ಶಿವಮೊಗ್ಗ ಜಿಲ್ಲೆ, ಸಾಗರದಲ್ಲಿ ಯಾತ್ರಿ ನಿವಾಸ	50.00
4.	ಸಿರಸಿಯಲ್ಲಿ ಯಾತ್ರಿ ನಿವಾಸ	50.00
5.	ಗುಲ್ಬರ್ಗಾದಲ್ಲಿ ಪ್ರವಾಸಿ ಸ್ವಾಗತ ಕೇಂದ್ರ	25.00
6.	ಗದಗ್ ಜಿಲ್ಲೆ ಲಕ್ಕುಂಡಿಯಲ್ಲಿ ಹೆದ್ದಾರಿ ಸೌಲಭ್ಯ	40.00
7.	ಬಳ್ಳಾರಿ ಜಿಲ್ಲೆ, ಕೂಡ್ಲಿಗಿಯಲ್ಲಿ ಹೆದ್ದಾರಿ ಸೌಲಭ್ಯ	40.00
8.	ಹಾವೇರಿ ಜಿಲ್ಲೆ, ಬಂಕಾಪುರ ಕ್ರಾಸ್‌ನಲ್ಲಿ ಹೆದ್ದಾರಿ ಸೌಲಭ್ಯ	40.00
9.	ಬಿಜಾಪುರ ಜಿಲ್ಲೆ, ಜಲ್ಕಿ ಕ್ರಾಸ್‌ನಲ್ಲಿ ಹೆದ್ದಾರಿ ಸೌಲಭ್ಯ	40.00
10.	ಬೆಂಗಳೂರಿನ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಹೆದ್ದಾರಿ ಸೌಲಭ್ಯ	50.00
11.	ಮುತ್ಯಾಲಮಡುವಿನಲ್ಲಿ ನೂತನ ಪ್ರವಾಸಿ ಕುಟೀರ	52.50
12.	ಶ್ರೀರಂಗಪಟ್ಟಣದಲ್ಲಿ ಹೆಚ್ಚುವರಿ ಪ್ರವಾಸಿ ಕುಟೀರ	55.00
13.	ನಂದಿಬೆಟ್ಟದಲ್ಲಿ ಹೆಚ್ಚುವರಿ ವಸತಿ ಸೌಲಭ್ಯ	28.60
	ಪ್ರವಾಸಿ ಕೇಂದ್ರಗಳಲ್ಲಿ ಸಾರ್ವಜನಿಕ ಶೌಚಾಲಯಗಳು	
14.	ಜೋಗ್‌ಗೆ ಹೋಗುವ ಮಧ್ಯದಾರಿಯ ಅರಸೀಕೆರೆ - ಹೊನ್ನಾವರ ರಸ್ತೆಯಲ್ಲಿ	8.86
15.	ಶಿವನಸಮುದ್ರ (ದರ್ಗದ ಬಳಿ)	8.86
16.	ಶ್ರೀ ರಾಮದೇವಕಟ್ಟೆ	8.86
17.	ಬಂಡೀಪುರದ ಬಳಿಯಲ್ಲಿರುವ ಮಲೆಕಾಮನಹಳ್ಳಿ	8.86
18.	ಗಾಣಗಾಪುರ (ಗುಲ್ಬರ್ಗಾ ಜಿಲ್ಲೆಯ ದೇವಸ್ಥಾನದ ಬಳಿ)	8.86
19.	ಹಂಪಿ (4 ಸಂಖ್ಯೆಗಳಲ್ಲಿ)	35.44

1	2	3
20.	ತುಮಕೂರು-ಹೊನ್ನಾವರ ರಸ್ತೆಯ ಯೋಜನೆಯನ್ನು ಗೊರವನಹಳ್ಳಿಗೆ ಸ್ಥಳಾಂತರಿಸಲಾಗಿದೆ	8.86
21.	ಬಾದಾಮಿ ಗುಹೆಯ ಬಳಿ	8.86
22.	ಶ್ರೀರಂಗಪಟ್ಟಣದ ಗುಂಬಜ್ ಬಳಿ	8.86
23.	ಹೊರನಾಡಿನ ಕಳಸದ ಬಳಿ	8.86
24.	ಮಂಗಳೂರಿನ ಬಳಿ ಪಿಲಿಕುಳ ನಿಸರ್ಗಧಾಮದಲ್ಲಿ (2 ಸಂಖ್ಯೆ)	17.72
25.	ಹಂಪಿಯ ಅರಣ್ಯ ವಸತಿ ಹಾಗೂ ಪ್ರವಾಸೋದ್ಯಮ ವಿಹಾರ ಧಾಮದ ಬಳಿ	50.00
26.	ಬೆಂಗಳೂರಿನ ಸ್ಯಾಂಕಿ ದೋಣಿ ವಿಹಾರದಲ್ಲಿ ಜಟ್ಟಿ ನಿರ್ಮಾಣ (ಕೆ.ಎಸ್.ಟಿ.ಡಿ.ಸಿ. ಪ್ರಸ್ತಾವನೆ)	11.00
27.	ಮೈಸೂರು, ಬೆಂಗಳೂರು ಮತ್ತು ಕೆ.ಆರ್. ಸಾಗರದಲ್ಲಿ (ಬೃಂದಾವನ ಉದ್ಯಾನವನ) ದೋಣಿ ವಿಹಾರಕ್ಕಾಗಿ ಒ.ಬಿ.ಎಂ. ಅನ್ನು ಖರೀದಿಸುವುದು. (ಕೆ.ಎಸ್.ಟಿ.ಡಿ.ಸಿ. ಪ್ರಸ್ತಾವನೆ)	15.00
28.	ಜಲಕ್ರೀಡಾ ಸಲಕರಣೆಗಳ ಖರೀದಿ 1) ಕಾರವಾರದ ದೇವಬಾಗ್ ಕಡಲುತೀರ ವಿಹಾರಧಾಮ 2) ಖಾರಾಪುರದ ಕಬಿನಿ ರಿವರ್ ಲಾಡ್ಜ್ 3) ಕಾಳಿ ವೈಲ್ಡರ್‌ನೆಸ್ ಕ್ಯಾಂಪ್	15.00
29.	ಹುಬ್ಬಳ್ಳಿಯ ಸಿದ್ಧಾರೂಢ ಮಠದಲ್ಲಿ ಯಾತ್ರಿನಿವಾಸಿ ನಿರ್ಮಾಣ	50.00
30.	ಬೆಂಗಳೂರಿನ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಉನ್ನತ ಮಾರುಕಟ್ಟೆ ಪರಿಸರ ಪ್ರವಾಸೋದ್ಯಮ ಧಾಮ ನಿರ್ಮಾಣ	59.88
31.	ಬೆಂಗಳೂರಿನ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ವಿದ್ಯಾರ್ಥಿ ಪ್ರಕೃತಿ ಶಿಬಿರ ನಿರ್ಮಾಣ	44.15
32.	ಮಂಡ್ಯ ಜಿಲ್ಲೆ ದೊಡ್ಡ ಮಾಕಳಿ ಫಿಷಿಂಗ್ ಕ್ಯಾಂಪ್‌ನಲ್ಲಿ ಲಾಗ್ ಹಟ್ಸ್ ನಿರ್ಮಾಣ	59.88
33.	ಚಿಕ್ಕಮಗಳೂರು ಜಿಲ್ಲೆ ಕೆಮ್ಮಣ್ಣುಗುಂಡಿಯಲ್ಲಿ ಪರಿಸರ ಪ್ರವಾಸೋದ್ಯಮ ಸೌಲಭ್ಯ ನಿರ್ಮಾಣ	59.88
34.	ಶ್ರೀರಂಗಪಟ್ಟಣದಲ್ಲಿರುವ ಸ್ಮಾರಕಗಳಿಗೆ ದೀಪಾಲಂಕಾರ	20.00
35.	ಚಿತ್ರದುರ್ಗ ಕೋಟೆಗೆ ಹೊನಲು ಬೆಳಕು	20.00
	ಉತ್ಸವ ಹಾಗೂ ಮೇಳಗಳಿಗೆ ಪ್ರೋತ್ಸಾಹಿಸಲು ನೆರವು	
36.	ಮೈಸೂರು ದಸರಾ ಮಹೋತ್ಸವ	10.00
37.	ಹಂಪಿ ಉತ್ಸವ	5.00
38.	ಹೊಯ್ಸಳ ಉತ್ಸವ	3.00

1	2	3
39.	ಪಟ್ಟದಕಲ್ಲು ಉತ್ಸವ	2.00
40.	ಕರಾವಳಿ ಉತ್ಸವ	5.00
41.	ಸಮಗ್ರ ಅಭಿವೃದ್ಧಿಗಾಗಿ ಹಂಪಿ ಉತ್ಸವ	17.00
42.	ಸಮಗ್ರ ಅಭಿವೃದ್ಧಿಗಾಗಿ ಜೋಗ್ ಪ್ರದೇಶ	19.00
		1159.83

2000-01ರಲ್ಲಿ ಮಂಜೂರಾಗಿರುವ ಯೋಜನೆಗಳು

ಕ್ರಮ ಸಂಖ್ಯೆ	ಯೋಜನೆಗಳ ಹೆಸರು	ಅಂದಾಜು ವೆಚ್ಚ (ಲಕ್ಷ ರೂಗಳಲ್ಲಿ)
ಈ ಕೆಳಕಂಡ ಸ್ಥಳಗಳಲ್ಲಿ ಕುಡಿಯುವ ನೀರಿನ ಹಾಗೂ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ		
1.	ಕಾರವಾರ ಕಡಲು ತೀರ	9.64
2.	ಗೋಕರ್ಣ, ಕುಮಟಾ ತಾಲ್ಲೂಕು	9.64
3.	ಕೊಂಡಜ್ಜಿ, ದಾವಣಗೆರೆ ಜಿಲ್ಲೆ	9.64
4.	ಬಿಜಾಪುರದಲ್ಲಿ ಗೋಲ್ ಗುಂಬಜ್ ಮತ್ತು ಇಬ್ರಾಹಿಂ ರೋಜಾ ಬಳಿ (2 ಸಂಖ್ಯೆಗಳು)	19.38
5.	ಬೀದರ್ ಬಳಿ ನಾನಕ್ ಝರ	9.25
6.	ಬನವಾಸಿ, ಉತ್ತರ ಕನ್ನಡ	9.25
7.	ಬಸವನಬಾಗೇವಾಡಿ, ಬಿಜಾಪುರ ಜಿಲ್ಲೆ (2 ಸಂಖ್ಯೆಗಳು)	18.50
8.	ಮೈಸೂರಿನ ಕಾರಂಜಿ ಕೆರೆಯ ಪಕ್ಷಿಧಾಮ ಅಭಿವೃದ್ಧಿ	60.00
9.	ಮೈಸೂರು ಜಿಲ್ಲೆಯ ಬಿಳಿಗಿರಿ ರಂಗನ ಬೆಟ್ಟದಲ್ಲಿ ಯಾತ್ರಿ ನಿವಾಸ ನಿರ್ಮಾಣ	70.00
10.	ಮೈಸೂರು ಜಿಲ್ಲೆಯ ತಲಕಾಡಿನಲ್ಲಿ ಯಾತ್ರಿ ನಿವಾಸ ನಿರ್ಮಾಣ	70.00
11.	ಗುಲ್ಬರ್ಗಾ ಕೆರೆಯಲ್ಲಿ ದೋಣಿ ವಿಹಾರ ಮತ್ತು ಸಂಗೀತ ಕಾರಂಜಿ ಸೌಲಭ್ಯ	11.05
12.	ಮಂಡ್ಯದಲ್ಲಿ ಪ್ರವಾಸಿ ಮಾಹಿತಿ ಕೇಂದ್ರ ನಿರ್ಮಾಣ	40.00
13.	ಗುಲ್ಬರ್ಗಾ ಜಿಲ್ಲೆಯ ಗಾಣಗಾಪುರದ ದತ್ತ ಪೀಠದಲ್ಲಿ ಯಾತ್ರಿ ನಿವಾಸ ನಿರ್ಮಾಣ	70.00
14.	ಬೆಳಗಾಂ ಜಿಲ್ಲೆ, ಅಥಣಿ ತಾಲ್ಲೂಕು, ಮನಸೂಳಿಯ ಮುಳ್ಳಯ್ಯನ ದೇವಸ್ಥಾನದ ಹತ್ತಿರ ಯಾತ್ರಿ ನಿವಾಸ ನಿರ್ಮಾಣ	70.00

1	2	3
15.	ಮಂಗಳೂರಿನ ಪಿಲಿಕುಳ ನಿಸರ್ಗಧಾಮದಲ್ಲಿ ಆಯುರ್ವೇದ ಚಿಕಿತ್ಸಾ ಕೇಂದ್ರ ಮತ್ತು ರಿಜುವನೇಷನ್ ಥೆರಾಪಿ ಕೇಂದ್ರ ಸ್ಥಾಪನೆ	50.00
16.	ಚಿತ್ರದುರ್ಗ ಕೋಟೆ ಬಳಿ ಕೆಫಟೇರಿಯ ಮತ್ತು ಉಪಹಾರ ಗೃಹ ನಿರ್ಮಾಣ	30.00
17.	ಉಡುಪಿ ಜಿಲ್ಲೆಯ ಮರವಂತೆ ಕಡಲು ತೀರದಲ್ಲಿ ಹೊನಲು ಬೆಳಕು ವ್ಯವಸ್ಥೆ	39.78
18.	ಉಡುಪಿ ಜಿಲ್ಲೆಯ ಮಲ್ಪೆ ಕಡಲು ತೀರದಲ್ಲಿ ಹೊನಲು ಬೆಳಕು ವ್ಯವಸ್ಥೆ	39.78
19.	ಕೋಲಾರ ಜಿಲ್ಲೆ, ಚಿಂತಾಮಣಿ ತಾಲ್ಲೂಕು ಮುರುಗಮಲ್ಲಾ ದರ್ಗದ ಬಳಿ ಯಾತ್ರಿ ನಿವಾಸ ನಿರ್ಮಾಣ	70.00
	ಒಟ್ಟು	**705.91**

2001-02ರಲ್ಲಿ ಮಂಜೂರಾಗಿರುವ ಯೋಜನೆಗಳು

ಕ್ರಮ ಸಂಖ್ಯೆ	ಯೋಜನೆಗಳ ಹೆಸರು	ಅಂದಾಜು ವೆಚ್ಚ (ಲಕ್ಷ ರೂಗಳಲ್ಲಿ)
1.	ಹಂಪಿಯಲ್ಲಿ ಸೂಚನಾ ಫಲಕ	50.00
2.	ಮೈಸೂರು ಅರಮನೆಗೆ ಧ್ವನಿ ಮತ್ತು ಬೆಳಕು	100.00
3.	ಶರಾವತಿ ಮತ್ತು ಕಾಳಿ ನದಿಗಳಲ್ಲಿ ದೋಣಿ ವಿಹಾರ ನಡೆಸಲು ನಾಲ್ಕು ಹೌಸ್ ಬೋಟ್ ಖರೀದಿ	114.00
4.	ಪಿಲಿಕುಳ ನಿಸರ್ಗಧಾಮದಲ್ಲಿ ಹರಿಟೇಜ್ ವಿಲೇಜ್ ಅಭಿವೃದ್ಧಿ	175.00
5.	ಸಾವನದುರ್ಗದಲ್ಲಿ ಸಾಹಸ ಪ್ರವಾಸೋದ್ಯಮ ಸೌಲಭ್ಯದ ಅಭಿವೃದ್ಧಿ	60.00
6.	ಪಣಂಬೂರು ಕಡಲು ತೀರದಲ್ಲಿ ಹೊನಲು ಬೆಳಕು ವ್ಯವಸ್ಥೆ	50.58
7.	ಬೀದರ್ ಜಿಲ್ಲೆ ಘೋಡವಾಡಿಯಲ್ಲಿ ಹಜರತ್ ಸೈಯದ್ ಇಸ್ಮಾಯಿಲ್ ಖಾದ್ರಿ ಬಳಿ ಸಾರ್ವಜನಿಕ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ	9.00
8.	ಮಾಹಿತಿ ತಂತ್ರಜ್ಞಾನ ಅಳವಡಿಸುವುದು	125.00
	ಒಟ್ಟು	**683.58**

ಅನುಬಂಧ - III

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ನಡೆಸುವ ವ್ಯವಸ್ಥಿತ ಪ್ರವಾಸಗಳ ವಿವರ:

1. ಬೆಂಗಳೂರು ನಗರ ವೀಕ್ಷಣೆ (1/2 ದಿನ)
2. ಬೆಂಗಳೂರು ನಗರ ವೀಕ್ಷಣೆ (1 ದಿನ)
3. ಮೈಸೂರು ಪ್ರವಾಸ
4. ಬೇಲೂರು-ಹಳೇಬೀಡು-ಶ್ರವಣಬೆಳಗೋಳ
5. ಮೈಸೂರು-ಶ್ರೀರಂಗಪಟ್ಟಣ-ನಂಜನಗೂಡು-ಊಟಿ-ಕೂನೂರು-ದೊಡ್ಡಬೆಟ್ಟ (3 ದಿನಗಳ ಪ್ರವಾಸ)
6. ತಿರುಪತಿ-ಮಂಗಾಪುರ (1 ದಿನದ ಪ್ರವಾಸ - ಭಾನುವಾರದಿಂದ ಶನಿವಾರದವರೆಗೆ)
7. ತಿರುಪತಿ-ಕಾಳಹಸ್ತಿ (ಪ್ರತಿ ಶುಕ್ರವಾರ ಮತ್ತು ಶನಿವಾರ)
8. ಮೈಸೂರು-ಊಟಿ-ಕೊಡೈಕೆನಲ್-ದೊಡ್ಡಬೆಟ್ಟ-ಕೂನೂರು
9. ದೇವಾಲಯಗಳ ಪ್ರವಾಸ (5 ದಿನಗಳ ಪ್ರವಾಸ)
10. ಮಂತ್ರಾಲಯ-ತುಂಗಭದ್ರಾ ಅಣೆಕಟ್ಟು-ಹಂಪಿ (4 ದಿನಗಳ ಪ್ರವಾಸ)
11. ಮಂತ್ರಾಲಯ ಮತ್ತು ಪಂಚಮುಖಿ (ಪ್ರತಿ ಬುಧವಾರ-ಶನಿವಾರ)
12. ನಾಗರಹೊಳೆ-ಮಡಿಕೇರಿ-ನಿಸರ್ಗಧಾಮ (2 ದಿನಗಳ ಪ್ರವಾಸ)
13. ದಕ್ಷಿಣ ಭಾರತ (9 ದಿನಗಳ ಪ್ರವಾಸ)
14. ಗೋವಾ-ಗೋಕರ್ಣ-ಜೋಗ್ ಫಾಲ್ಸ್ (5 ದಿನಗಳ ಪ್ರವಾಸ)
15. ಉತ್ತರ ಕರ್ನಾಟಕ ಪ್ರವಾಸ (5 ದಿನಗಳ ಪ್ರವಾಸ)
16. ಶಿವನಸಮುದ್ರ-ಸೋಮನಾಥಪುರ-ರಂಗನತಿಟ್ಟು (1 ದಿನದ ಪ್ರವಾಸ)
17. ಹೊಗೆನಕಲ್ ಫಾಲ್ಸ್ - ಕೃಷ್ಣಗಿರಿ ಅಣೆಕಟ್ಟು (1 ದಿನದ ಪ್ರವಾಸ)
18. ಜೋಗ್ ಫಾಲ್ಸ್ (3 ದಿನಗಳ ಪ್ರವಾಸ)
19. ಹೊಗೆನಕಲ್ ಫಾಲ್ಸ್ - ಏರ್ಕಾಡ್ (2 ದಿನಗಳ ಪ್ರವಾಸ)
20. ಮಂತ್ರಾಲಯ-ಮಹಾನಂದಿ-ಶ್ರೀಶೈಲಂ-ನಾಗಾರ್ಜುನ ಸಾಗರ-ಹೈದರಾಬಾದ್-ರಾಮೋಜಿರಾವ್ ಫಿಲಂಸಿಟಿ (7 ದಿನಗಳ ಪ್ರವಾಸ)
21. ಶಿಂಷಾ-ಮಲೆಮಹದೇಶ್ವರ ಬೆಟ್ಟ - ಬಿಳಿಗಿರಿರಂಗನ ಬೆಟ್ಟ - ಕೆ. ಗುಡಿ - ನಂಜನಗೂಡು ಮೈಸೂರು ಅರಮನೆ (ದೀಪಾಲಂಕಾರ ಮಾತ್ರ)
22. ಮುನ್ನೂರು-ತೇಕ್ಕಡಿ-ಕೊಟ್ರಾಲಂ ಫಾಲ್ಸ್ (6 ದಿನಗಳ ಪ್ರವಾಸ)
23. ನಂದಿ ಬೆಟ್ಟ-ಮುದ್ದೇನಹಳ್ಳಿ (1 ದಿನ ಪ್ರವಾಸ)
24. ಶ್ರವಣಬೆಳಗೋಳ-ಬೇಲೂರು-ಹಳೇಬೀಡು-ಮೈಸೂರು-ಜಿ.ಆರ್.ಎಸ್. ಫ್ಯಾಂಟಸಿ ಪಾರ್ಕ್ (2 ದಿನಗಳ ಪ್ರವಾಸ)
25. ಮೈಸೂರು-ಜಿ.ಆರ್.ಎಸ್. ಫ್ಯಾಂಟಸಿ ಪಾರ್ಕ್-ಊಟಿ-ಕೂನೂರು-ದೊಡ್ಡಬೆಟ್ಟ (3 ದಿನಗಳ ಪ್ರವಾಸ)
26. ಬೇಲಂ ಗುಹೆಗಳು, ಮಹಾನಂದಿ, ಶ್ರೀಶೈಲಂ (5 ದಿನಗಳ ಪ್ರವಾಸ)

27. ಬೆಂಗಳೂರು ಸುತ್ತಮುತ್ತಲ ದೇವಾಲಯಗಳ ಪ್ರವಾಸ
28. ಬೆಂಗಳೂರು-ಧರ್ಮಸ್ಥಳ ಸರ್ವೀಸ್ (ಪ್ರತಿ ದಿನ)

ಅನುಬಂಧ-III

ಈ ಕೆಳಕಂಡ ಸ್ಥಳಗಳಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಹೋಟೆಲುಗಳನ್ನು ನಿರ್ವಹಿಸಲಾಗುತ್ತಿದೆ:-

1. ಬಿಜಾಪುರ
2. ಬಾದಾಮಿ
3. ಬೆಳಗಾವಿ
4. ಕಮಲಾಪುರ
5. ಟಿ.ಬಿ. ಡ್ಯಾಂ
6. ಜೋಗ್ ಫಾಲ್ಸ್
7. ಮಡಿಕೇರಿ
8. ಹಳೇಬೀಡು
9. ಬೇಲೂರು
10. ಕೆ.ಆರ್.ಎಸ್.
11. ಮೈಸೂರು
12. ಶ್ರೀರಂಗಪಟ್ಟಣ
13. ಮಲೆಕಾಮನಹಳ್ಳಿ
14. ಊಟಿ
15. ತಿರುಮಲ
16. ಎಡಿಯೂರು
17. ನಂದಿ ಬೆಟ್ಟ
18. ಮುಳಬಾಗಿಲು

ಈ ಕೆಳಕಂಡ ಸ್ಥಳಗಳಲ್ಲಿ ಪ್ರವಾಸಿ ಮಾಹಿತಿ ಕೇಂದ್ರಗಳನ್ನು ತೆರೆಯಲಾಗಿದೆ:-

1. ಬೆಂಗಳೂರು
2. ಮೈಸೂರು
3. ಮಂಡ್ಯ
4. ಚಾಮರಾಜನಗರ
5. ಮಡಿಕೇರಿ
6. ಮಂಗಳೂರು
7. ಉಡುಪಿ
8. ಹಾಸನ
9. ಬೇಲೂರು
10. ಹಳೇಬೀಡು
11. ಶ್ರವಣಬೆಳಗೋಳ
12. ಶಿವಮೊಗ್ಗ
13. ಜೋಗ್ ಜಲಪಾತ
14. ಕಾರವಾರ
15. ಧಾರವಾಡ
16. ಗದಗ್
17. ಹೊಸಪೇಟೆ
18. ಚಿತ್ರದುರ್ಗ
19. ಹಾವೇರಿ
20. ತುಮಕೂರು
21. ಕೋಲಾರ
22. ರಾಯಚೂರು
23. ಗುಲ್ಬರ್ಗಾ
24. ಬಿಜಾಪುರ
25. ಬಸವಕಲ್ಯಾಣ
26. ಬಾಗಲಕೋಟೆ
27. ಐಹೊಳೆ
28. ಬಾದಾಮಿ
29. ಬನವಾಸಿ
30. ಬೆಳಗಾವಿ
31. ಗೋವಾ
32. ಮುಂಬೈ
33. ನವದೆಹಲಿ

ಬಿಜಾಪುರ ವಿಭಾಗದಲ್ಲಿ ಸರ್ವೇಕ್ಷಣೆ ನಡೆಸಲು ಆಧುನಿಕ ಉಪಕರಣ ಬಳಕೆ

2248 (2676) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಗೆ ರಸ್ತೆಗಳ ಸರ್ವೇಕ್ಷಣೆ ನಡೆಸಲು ಆಧುನಿಕ ಉಪಕರಣಗಳನ್ನು ಹೊಂದಿದ ವಾಹನಗಳನ್ನು ಸರ್ಕಾರವು ಒದಗಿಸಿರುವಿದೇ; ಯಾವಾಗ ಒದಗಿಸಲಾಗಿದೆ;

ಆ) ಹಾಗಿದ್ದರೆ, ಆ ವಾಹನಗಳನ್ನು ರಾಜ್ಯದ ಯಾವ ಯಾವ ಭಾಗಗಳಿಗೆ ನೀಡಲಾಗಿದೆ; ಆ ವಾಹನಗಳ ಉಪಯೋಗವೇನು;